Crl.Misc.No.1422/2024, PW-2

ಶಿವಶಂಕರ ತಂದೆ ಬಾಳಪ್ಪ

ದಿನಾಂಕ 23-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಶ್ರೀ ಎಮ್.ಎ.ಬಿ ವಕೀಲರಿಂದ:-**

ನನಗೆ 3 ಜನ ಮಕ್ಕಳು. ಇಬ್ಬರು ಗಂಡುಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ಪ್ರಮಾಣ ಪತ್ರವನ್ನು ನನ್ನ ಮಗಳು ಮತ್ತು ನಾನು ಕೂಡಿ ಬರೆಸಿರುತ್ತೇವೆ. ನನ್ನ ಮಗಳ ಮದುವೆ 2017 ರಲ್ಲಿ ಆಗಿರುತ್ತದೆ. ಮದುವೆ ಮುದೋಳದಲ್ಲಿ ಆಗಿರುತ್ತದೆ. ಮದುವೆ ಸಮಯದಲ್ಲಿ 8 ತೊಲೆ ಬಂಗಾರ ರೂ.1,00,000/- ಹಣ ಮತ್ತು ಒಂದು ಲಕ್ಷ ಕಿಮ್ಮತ್ತಿನ ಬಾಂಡೆ ಸಾಮಾನುಗಳನ್ನು ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶ್ಚಿತಾರ್ಥ ಸಮಯದಲ್ಲಿ ಅರ್ಧ ತೊಲೆ ಬಂಗಾರ ಹಾಕಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ 8 ದಿನಕ್ಕೆ ನನ್ನ ಮಗಳು ಗಂಡನ ಮನೆಗೆ ಹೋಗಿರುತ್ತಾಳೆ. ಒಂದು ವರ್ಷ ಕಾಲ ಗಂಡನ ಮನೆಯಲ್ಲಿದ್ದು ನಂತರ ಬೇರೆ ಮನೆಯಲ್ಲಿ ಬಾಡಿಗೆ ಇದ್ದರು ಎಂದರೆ ಸರಿ. ಎರಡು ಹೆಣ್ಣುಮಕ್ಕಳು ಹುಟ್ಟಿದ್ದರಿಂದ ನನ್ನ ಮಗಳನ್ನು ಎದುರುದಾರರು ಹೊರ ಹಾಕಿರುತ್ತಾರೆ. ನನ್ನ ಮಗಳು ಗಂಡನ ಮನೆಯಲ್ಲಿ 3-4 ವರ್ಷ ಇದ್ದಳು. ಎದುರುದಾರರ ಮನೆಯಲ್ಲಿ ಅತ್ತೆ-ಮಾವ, ಅತ್ತೆಯ ತಂಗಿ, ನಾದಿನಿಯರು, ಅಳಿಯಂದಿರು ಇರುತ್ತಾರೆ. ನಾದಿನಿಯರಗೆ ಮದುವೆಯಾದರೂ ಸಹ ಅವರ ಮಕ್ಕಳು ಮತ್ತು ಗಂಡ ಸೇರಿ ಅಲ್ಲಿಯೇ ಇರುತ್ತಾರೆ. ನಾದಿನಿಯರು ಅವರ ಗಂಡನ ಮನೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾವು 14 ಜನರ ಮೇಲೆ ಕೇಸು ಹಾಕಿರುತ್ತೇವೆ.

2. ನನ್ನ ಮಗಳು ಎರಡೂ ಹೆರಿಗೆಗಳು ಗುಲಬರ್ಗಾದಲ್ಲಿ ಆಗಿರುತ್ತವೆ. 1, 3, 4, 5, 6 ನೇ ಎದುರುದಾರರು ಕಿರುಕುಳ ಕೊಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಣ್ಣುಮಕ್ಕಳಿಗೆ ಜನ್ಮ ನೀಡಿದ್ದಿ ಎಂದು ಅರ್ಜಿದಾರಳಿಗೆ ಹೀಯಾಳಿಸಿ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊಡೆಬಡೆ ಮಾಡಿ ತಾಳಿ ಕಿತ್ತುಕೊಂಡು ಕೌಟುಂಬಿಕ ದೌರ್ಜನ್ಯ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಿರುಕುಳ ಕೊಟ್ಟಿದ್ದರಿಂದ ನನ್ನ ಮಗಳು ಆತ್ಮಹತ್ಯೆಗೆ ಪ್ರಯತ್ನಿಸಿರುತ್ತಾಳೆ. ಛತ್ತದಿಂದ ಬಿದ್ದಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ಗಂಡನ ಸ್ವಂತ ಮನೆಯಲ್ಲಿ ಇದ್ದಾಗಲೇ ಛತ್ತದಿಂದ ಬಿದ್ದಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮನೆಯ ಮೇಲಿಂದ ಬಿದ್ದಿದ್ದರಿಂದ ಗಾಯಗಳಾಗಿರುತ್ತವೆ ಎಂದು ಪೋಟೋದಲ್ಲಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳು ಮನೆಯ ಬಾಗಿಲಿನಿಂದ ಎಡವಿ ಬಿದ್ದು ಗದ್ದಕ್ಕೆ ಮತ್ತು ಮೂಗಿಗೆ ಗಾಯ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಆಕೆಯ ಗಂಡ ಕೈ ಹಿಡಿದಿದ್ದರಿಂದ ಮೂಗಿಗೆ ಮತ್ತು ಗದ್ದಕ್ಕೆ ಪೆಟ್ಟಾಗಿರುತ್ತದೆ. ಈ ವಿಷಯವನ್ನು ನನ್ನ ಮಗಳು ಬಾಜು ಪೇಸೆಂಟ್ ರವರ ಪೋನಿನಿಂದ ತಿಳಿಸಿರುತ್ತಾಳೆ. ನಮ್ಮ ನೆರೆ-ಹೊರೆಯವರು ಪೋನ್ ಮೂಲಕ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರು ಪಡಿಸಿರುವುದಿಲ್ಲ. ಮುಧೋಳ ಪೋಲಿಸ್ ಠಾಣೆಯಲ್ಲಿ ನನ್ನ ಮಗಳು ದೂರು ಕೊಟ್ಟಿರುತ್ತಾಳೆ. ಸದರಿ ಕೇಸಿನಲ್ಲಿ ನನ್ನ ಮಗಳು ಮತ್ತು ಅಳಿಯನನ್ನು ಪ್ರತ್ಯೇಕವಾಗಿ ಇಡುತ್ತೇವೆ ಎಂದು ಹೇಳಿದ್ದರಿಂದ ದೂರನ್ನು ವಾಪಸ್ ತೆಗೆದುಕೊಂಡಿರುತ್ತೇವೆ.

೩. ಎದುರುದಾರನಿಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ಪಹಣಿಯು ಶಿವಪುತ್ರಪ್ಪನ ಹೆಸರಿನಲ್ಲಿರುತ್ತದೆ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.